# ಕರ್ನಾಟಕ ಸರಕಾರ

ಸಂಖ್ಯೆ:ಹಿಂವಕಇ/ದ.ಕ./ವಿನಿ/ಸಿಬ್ಬಂದಿ/ಸಿಆರ್-21/16-17

ಜಿಲ್ಲಾ ಅಧಿಕಾರಿಯವರ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಆನೆಗುಂಡಿ ರೋಡ್, ಬಿಜೈ-ಕಾಪಿಕಾಡ್,
ಮಂಗಳೂರು, ದಿನಾಂಕ:24-06-2017

## ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ "ಡಿ" ವೃಂದದ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು ಎಸ್.ಎಸ್.ಎಲ್.ಸಿ.ಅಂಕಗಳ ಜ್ಯೇಷ್ಠತೆಯ ಆಧಾರದ ಮೇಲೆ ಪ್ರವರ್ಗವಾರು/ಮೀಸಲಾತಿಯನುಸಾರ ಅಡುಗೆ ತಯಾರಿಕೆ ಪರೀಕ್ಷೆಗೆ ಆಯ್ಕೆಯಾದ 1:3 ರ ಅನುಪಾತದಲ್ಲಿ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳ ಅಭ್ಯರ್ಥಿಗಳಿಗೆ ಅಡುಗೆ ತಯಾರಿ ಪರೀಕ್ಷೆಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು.

ದಾಖಲಾತಿ ಪರಿಶೀಲನೆಯ ನಂತರ 1:3 ರ ಅಭ್ಯರ್ಥಿಗಳ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್ http://www.dk.nic.in ರಲ್ಲಿ ಪ್ರಕಟಿಸಲಾಗಿರುತ್ತದೆ ಹಾಗೂ ಸದರಿ ಪಟ್ಟಿಯಲ್ಲಿ ಹೆಸರಿಸಿರುವ ಅಡುಗೆಯವರು, ಅಡುಗೆ ಸಹಾಯಕರ ಹುದ್ದೆಗಳ ಅಭ್ಯರ್ಥಿಗಳು ಮಾತ್ರ ಈ ಕೆಳಕಂಡ ನಿಗದಿತ ವೇಳಾಪಟ್ಟಿಯಂತೆ ಅಡುಗೆ ತಯಾರಿಕೆ ಪರೀಕ್ಷೆಗೆ ಈ ಕೆಳಕಂಡ ದಾಖಲೆಗಳೊಂದಿಗೆ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ. ಈ ಪರೀಕ್ಷೆಗಳಿಗೆ ಹಾಜರಾಗುವಂತೆ ಅಭ್ಯರ್ಥಿಗಳಿಗೆ ಪ್ರತ್ಯೇಕ ಕರೆ ಪತ್ರ(Call letter)ಇರುವುದಿಲ್ಲ.

## ವೇಳಾಪಟ್ಟಿ

| ಇಲಾಖೆ | ದಿನಾಂಕ ಮತ್ತು ಸಮಯ | ಹುದ್ದೆಗಳ ವಿವರ | ಪರೀಕ್ಷಾ ವಿವರ | ಅಡುಗೆ ತಯಾರಿ ಪರೀಕ್ಷೆ ನಡೆಯುವ ಸ್ಥಳ |
|---|---|---|---|---|
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | 28-06-2017 ಪೂರ್ವಾಹ್ನ: 9.30 ಗಂಟೆ | ಅಡುಗೆಯವರು | ಅಡುಗೆ ತಯಾರಿಕೆ ಪರೀಕ್ಷೆ | ಕುದ್ಮಲ್ ರಂಗರಾವ್ ಮೆಟ್ರಿಕ್ ಪೂರ್ವ/ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಕೊಡಿಯಾಲ್‌ಬೈಲ್(ಪಿ.ವಿ.ಎಸ್.ಸರ್ಕಲ್), ಮಂಗಳೂರು ತಾಲೂಕು |
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | 29-06-2017 ಪೂರ್ವಾಹ್ನ: 9.30 ಗಂಟೆ | ಅಡುಗೆ ಸಹಾಯಕರು | ಅಡುಗೆ ತಯಾರಿಕೆ ಪರೀಕ್ಷೆ | |

1. ಆನ್‌ಲೈನ್ ಮೂಲಕ ಸಲ್ಲಿಸಲಾದ ಅರ್ಜಿಯ ಪ್ರತಿ.
2. ದಾಖಲಾತಿ ಪರಿಶೀಲನೆ ಹಾಜರಾತಿ ಸೂಚನಾ ಪತ್ರ.

ಸೂಚನೆಗಳು:

1. ಅಭ್ಯರ್ಥಿಗಳನ್ನು ದಾಖಲಾತಿ ಪರಿಶೀಲನೆ ನಂತರ ಪ್ರಾಯೋಗಿಕ ಪರೀಕ್ಷೆಗೆ ಅವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಜೇಷ್ಠತೆ ಆಧಾರದ ಮೇಲೆ ಪ್ರವರ್ಗವಾರು/ಮೀಸಲಾತಿ ಅನುಸಾರ 1:3 ಅನುಪಾತದಲ್ಲಿ ಆಹ್ವಾನಿಸಲಾಗಿದೆ.
2. ಇದು ಪ್ರಾಯೋಗಿದ ಪರೀಕ್ಷೆ ಹಾಜರಾತಿ ಪತ್ರವಾಗಿದ್ದು, ಇದರ ಆಧಾರದ ಮೇಲೆ ಅಭ್ಯರ್ಥಿಯು ಹುದ್ದೆಯನ್ನು ಕೋರುವ ಹಕ್ಕು ಹೊಂದಿರುವುದಿಲ್ಲ. ಹುದ್ದೆಗಳ ನೇಮಕಾತಿಯು ಅಭ್ಯರ್ಥಿಯು ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಯಲ್ಲಿ ಹೊಂದುವ ಅರ್ಹತೆ ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಪಡೆದ ಅಂಕಗಳ ಜೇಷ್ಠತೆಯನ್ನು ಆಧರಿಸಿರುತ್ತದೆ.
3. ಪ್ರಾಯೋಗಿಕ ಪರೀಕ್ಷೆಗೆ ಹಾಜರಾತಿ ಪತ್ರವನ್ನು ಮತ್ತೊಮ್ಮೆ ಕಳುಹಿಸಲಾಗುವುದಿಲ್ಲ. ನಿಗದಿಪಡಿಸಿದ ದಿನಾಂಕದಂದು ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗದಿದ್ದಲ್ಲಿ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.
4. ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಪ್ರಯಾಣ/ದಿನಭತ್ಯೆ ನೀಡಲಾಗುವುದಿಲ್ಲ.
5. ನೇಮಕಾತಿ ಬಗ್ಗೆ ಯಾವುದೇ ರೀತಿಯ ಅನಧಿಕೃತ ಚಟುವಟಿಕೆಗಳಿಗೆ ಆಸ್ಪದವಿರುವುದಿಲ್ಲ. ಈ ರೀತಿ ಪ್ರಯತ್ನಿಸುವವರ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.

Kundum

ಸದಸ್ಯ ಕಾರ್ಯದರ್ಶಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ
ಜಿಲ್ಲಾಮಟ್ಟದ ಗ್ರೂಪ್ ಡಿ ನೌಕರರ
ನೇಮಕಾತಿ ಪ್ರಾಧಿಕಾರ, ದಕ್ಷಿಣ ಕನ್ನಡ ಜಿಲ್ಲೆ